ಹಾಗೂ ಲಗೂನ್‌ಗಳಿಗೆ ಬದಲಾಗಿ ಮುಚ್ಚಿರುವ ಅನ್‌ಎರೋಬಿಕ್ ಡೈಜೇಸ್ಟರ್ ಎಂಬ ಘಟಕಗಳನ್ನು ಅಳವಡಿಸಿರುವ ಕಾರಣ ವಾಸನೆಯು ಬಹಳಷ್ಟು ಕಡಿಮೆಯಾಗಿದೆ. ಹಾಗೂ ಶುದ್ಧೀಕರಿಸಿದ ಕಲುಷಿತ ನೀರಿನ ಪೂರ್ಣ ಪ್ರಮಾಣವನ್ನು ಕಂಪೋಸ್ಟ್ ತಯಾರಿಕೆಗೆ ಉಪಯೋಗಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಉದ್ದಿಮೆಗೆ ನಿರ್ದೇಶನ ನೀಡಿರುತ್ತದೆ.

ಅಂಕೋಲ-ವಡ್ಡಿ ಮತ್ತು ಸಿರಸಿ ರಸ್ತೆ ನಿರ್ಮಾಣ

3184 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆ ಕರಾವಳಿ ಮಲೆನಾಡು ಸೇರಿಸುವ ಅಂಕೋಲಾ-ವಡ್ಡಿ ಸಿರಸಿ ರಸ್ತೆ ನಿರ್ಮಾಣ ಯಾವ ಹಂತದಲ್ಲಿದೆ?*

ಆ) *ಈ ರಸ್ತೆಗೆ ಬಿಡುಗಡೆಯಾದ ಅನುದಾನ ಎಷ್ಟು?*

ಇ) *ಸರ್ವ ಋತು ರಸ್ತೆಯ ಉದ್ದದ ಪ್ರಮಾಣ ಎಷ್ಟು, ಇನ್ನೂ ಆಗುವ ಕಿಮೀಗಳೆಷ್ಟು?*

ಈ) *ಸರ್ಕಾರ ಅನುದಾನ ನೀಡಿ ಈ ರಸ್ತೆಯನ್ನು ಪೂರ್ತಿ ಸರ್ವಋತು ರಸ್ತೆಯನ್ನಾಗಿ ಮಾಡಲು ಉದ್ದೇಶಿಸಿದೆಯೇ?*

ಶ್ರೀ ಧರ್ಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಅಂಕೋಲಾ ವಡ್ಡಿ ಸಿರಸಿ ರಸ್ತೆಯ ಒಟ್ಟು ಉದ್ದ 76.57 ಕಿಮೀ ಈ ಪೈಕಿ 70.68 ಕಿಮೀ ಉದ್ದದ ರಸ್ತೆಗೆ ಡಾಂಬರೀಕರಣವಾಗಿರುತ್ತದೆ. ಉಳಿದ 5.89 ಕಿಮೀ ಉದ್ದದ ರಸ್ತೆಗೆ ಖಡೀಕರಣವಾಗಿರುತ್ತದೆ ಮತ್ತು 3.69 ಕಿಮೀ ಉದ್ದದ ಖಡೀಕರಣವಾಗಿರುವ ರಸ್ತೆಯನ್ನು ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಈ ರಸ್ತೆಯ ಅಭಿವೃದ್ಧಿಗಾಗಿ ಒಟ್ಟು ರೂ. 15.00 ಲಕ್ಷ ಮಂಜೂರಾಗಿರುತ್ತದೆ. (75.00 ಕೋಟಿ ರೂ.ಗಳ ಕಾರ್ಯಕ್ರಮದಲ್ಲಿ).

ಇ) ಈ ರಸ್ತೆಯ ಇಡೀ 76.57 ಕಿಮೀ ಉದ್ದವು ಸರ್ವಋತು ರಸ್ತೆಯಾಗಿರುತ್ತದೆ.

ಈ) ಈ ರಸ್ತೆಯು ಈಗಾಗಲೇ ಸರ್ವಋತು ರಸ್ತೆಯಾಗಿರುತ್ತದೆ.

ಪ್ರವಾಸೋದ್ಯಮ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನ

3185 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ 1999-2000, 2000-01ಕ್ಕೆ ಪ್ರವಾಸೋದ್ಯಮ ಅಭಿವೃದ್ಧಿಗೆ ಬಿಡುಗಡೆಗೊಂಡ ಅನುದಾನವೆಷ್ಟು?*

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ 1999-2000, 2001-01ಕ್ಕೆ ಬಿಡುಗಡೆಯಾದ ಅನುದಾನವೆಷ್ಟು ? ಯಾವ ಯಾವ ಕಾಮಗಾರಿಗೆ (ತಾಲ್ಲೂಕುವಾರು ಮಾಹಿತಿ) ಎಷ್ಟೆಷ್ಟು ಬಿಡುಗಡೆ ಮಾಡಲಾಗಿದೆ.

ಇ) ವರ್ಷಕ್ಕೆ ಸಹಸ್ರಾರು ಪ್ರವಾಸಿಗರು ಬರುವ ಸಿರ್ಸಿ ತಾಲ್ಲೂಕಿನ ಸಹಸ್ರಲಿಂಗ ಹಾಗೂ ಸಿರ್ಸಿಯಿಂದ ಯಾಣಕ್ಕೆ ಹೋಗುವ ರಸ್ತೆಯ ಅಭಿವೃದ್ಧಿಯನ್ನು ಸರ್ಕಾರ ಎಂದು ಕೈಗೊಳ್ಳುವುದು ?

ಈ) ಉತ್ತರ ಕನ್ನಡ, ಸಿರ್ಸಿ ತಾಲ್ಲೂಕಿನ ಸಹಸ್ರಲಿಂಗ ಮತ್ತು ಯಾಣಕ್ಕೆ ಹೋಗುವ ರಸ್ತೆ ಇನ್ನೂ ಅಭಿವೃದ್ಧಿ ಕಾಣದೇ ಇರಲು ಕಾರಣವೇನು ?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು) :

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ 1999-2000ಕ್ಕೆ ರೂ. 7.10 ಕೋಟಿ ಖರ್ಚು ಮಾಡಿದೆ. 2000-2001ಕ್ಕೆ ರೂ. 10.00 ಕೋಟಿ ನಿಗದಿಪಡಿಸಿದೆ.

ಆ) 1999-2000 ಮತ್ತು 2000-2001ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಧನ ಸಹಾಯದಿಂದ ಹಾಗೂ ಕೇಂದ್ರ ಸರ್ಕಾರವು ಆದ್ಯತಾ ಪಟ್ಟಿಯಲ್ಲಿ ಸೇರಿಸಿರುವ ಈ ಕೆಳಕಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ.

		ರೂ.ಲಕ್ಷಗಳಲ್ಲಿ
1.	ಗೋಕರ್ಣದಲ್ಲಿ ಯಾತ್ರಿ ನಿವಾಸ ನಿರ್ಮಾಣ	70.00
2.	ಕುಡಿಯುವ ನೀರು ಮತ್ತು ಶೌಚಾಲಯ ಸೌಲಭ್ಯ	
	1. ಗೋಕಾಕ್	9.00
	2. ಕಾರವಾರ	9.00
3.	ಆಯುರ್ವೇದ ಚಿಕಿತ್ಸಾ ಕೇಂದ್ರ ದೇವಬಾಗ್, ಕಾರವಾರ	70.00
4.	ಬನವಾಸಿಯ ಸರ್ವತೋಮುಖ ಅಭಿವೃದ್ಧಿಗಾಗಿ	95.00

ಇ) -

ಈ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ತಾಲ್ಲೂಕಿನ ಯಾಣದ ಕೂಡು ರಸ್ತೆ ಅಭಿವೃದ್ಧಿಗಾಗಿ ರೂ. 15.00 ಲಕ್ಷಗಳನ್ನು 1997-98 ಹಾಗೂ 1998-99ರಲ್ಲಿ ಜಿಲ್ಲಾಡಳಿತಕ್ಕೆ ಒದಗಿಸಲಾಗಿರುತ್ತದೆ.

ಅರಣ್ಯ ನಾಶದ ಕುರಿತು

3187 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ ?

ಅ) ಕಳೆದ 3 ವರ್ಷಗಳಲ್ಲಿ ಒಟ್ಟು ನಾಶವಾದ ಅರಣ್ಯ ಪ್ರದೇಶ ಎಷ್ಟು ? ಅದಕ್ಕೆ ಕಾರಣವೇನು ? (ಜಿಲ್ಲಾವಾರು ಮಾಹಿತಿ ನೀಡುವುದು)